# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಮಿತಿ (ಅರ್ಜಿಗಳ ಸಮಿತಿ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 13/12/19

ವಿಧಾನಸಭೆ ಅರ್ಜಿಗಳ ಸಮಿತಿ ವರದಿ ಆಧರಿಸಿ ಬಿಬಿಎಂಪಿ ಕ್ರಮ

# ಬೌರಿಂಗ್ ಕ್ಲಬ್ ಕಾಂಪೌಂಡ್ ನೆಲಸಮ

**ವಿಕ ಸುದ್ದಿಲೋಕ** ಬೆಂಗಳೂರು

ಗುತ್ತಿಗೆ ಒಪ್ಪಂದ ಉಲ್ಲಂಘಿಸಿ ಅಕ್ರಮವಾಗಿ ಕಾಂಪೌಂಡ್ ಸೇರಿದಂತೆ ಇನ್ನಿತರ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದ ಪ್ರತಿಷ್ಠಿತ ಬೌರಿಂಗ್ ಕ್ಲಬ್ ಕಾಂಪೌಂಡನ್ನು ಬಿಬಿಎಂಪಿ ಅಧಿಕಾರಿಗಳು ಗುರುವಾರ ತೆರವುಗೊಳಿಸಿದರು.



ಕಾಂಪೌಂಡ್ ತೆರವುಗೊಳಿಸಿದ ವೇಳೆ ವಿರೋಧ ವ್ಯಕ್ತಪಡಿಸಿದ ಕ್ಲಬ್ ಸದಸ್ಯರು.

ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಬೌರಿಂಗ್ ಕ್ಲಬ್‌ನ ಕಾಂಪೌಂಡ್ ತೆರವಿಗೆ ಮುಂದಾಗಿದ್ದ ಬಿಬಿಎಂಪಿ ಅಧಿಕಾರಿಗಳ ತಂಡಕ್ಕೆ ಕ್ಲಬ್ ಸಿಬ್ಬಂದಿ ಕೆಲ ಕಾಲ ಅಡ್ಡಿಪಡಿಸಿದರು. ಈ ಹಿನ್ನೆಲೆಯಲ್ಲಿ ಅರೆಬರೆ ತೆರವು ಕಾರ್ಯ ನಡೆಸಿದ ಬಿಬಿಎಂಪಿ ಅಧಿಕಾರಿಗಳು ಸ್ಥಳದಿಂದ ಹೊರಟು ಹೋದರು.

ವಿಧಾನಸಭೆಯ ಅರ್ಜಿಗಳ ಸಮಿತಿ ವರದಿ ಆಧರಿಸಿ, ಬಿಬಿಎಂಪಿ ಆಯುಕ್ತರ ನಿರ್ದೇಶನದಂತೆ ತೆರವು ಕಾರ್ಯ ನಡೆಸಲಾಗಿದೆ ಎಂದು ಬಿಬಿಎಂಪಿ ಪೂರ್ವ ವಲಯದ ಜಂಟಿ ಆಯುಕ್ತರಾದ ಪಲ್ಲವಿ ತಿಳಿಸಿದರು.

"ಸರಕಾರದಿಂದ ಲೀಸ್ ಪಡೆದಿರುವ ಜಾಗವಾಗಿರುವ ಕಾರಣ ಯಾವುದೇ ಕಾಮಗಾರಿಗೆ ಅನುಮತಿ ಪಡೆಯಬೇಕು. ಆದರೂ ಅಕ್ರಮವಾಗಿ ನಿರ್ಮಾಣ ಮಾಡಲಾಗಿತ್ತು. ಅನಧಿಕೃತ ನಿರ್ಮಾಣ ಕಾಮಗಾರಿ ನಡೆಸದಂತೆ ಹಾಗೂ ತೆರವುಗೊಳಿಸುವಂತೆ ಸೂಚನೆ ನೀಡಿದ್ದರೂ ಕಿವಿಗೊಡದ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆ ನಡೆಸಲಾಯಿತು," ಎಂದು ಪಲ್ಲವಿ ಹೇಳಿದರು. ಆದರೆ, ತೆರವು ಕಾರ್ಯಾಚರಣೆ ಕುರಿತು ನಮಗೆ ಯಾವುದೇ ನೋಟಿಸ್ ನೀಡಿಲ್ಲ ಎಂದು ಕ್ಲಬ್‌ನ ಪದಾಧಿಕಾರಿಗಳು ಆರೋಪಿಸಿದ್ದಾರೆ.

ಕಾರ್ಯದರ್ಶಿ ಎಚ್.ಎಸ್ ಶ್ರೀಕಾಂತ್ ಮಾತನಾಡಿ, "ಕಾಂಪೌಂಡ್ 100ಕ್ಕೂ ಹೆಚ್ಚು ವರ್ಷಗಳಷ್ಟು ಹಳೆಯದಾಗಿದೆ. ಟೆಂಡರ್‌ಶ್ಯೂರ್ ಕಾಮಗಾರಿ ಹಾಗೂ ಕಳೆದ ವರ್ಷದ ಮಳೆಯಿಂದ ಕಾಂಪೌಂಡ್‌ಗೆ ಹಾನಿಯಾಗಿತ್ತು. ಅಪಾಯವಾಗುವ ಸಾಧ್ಯತೆ ಹಿನ್ನೆಲೆಯಲ್ಲಿ ಅದರ ಮೇಲೆ ಪ್ಲಾಸ್ಟರಿಂಗ್ ಮಾಡಲಾಗಿದೆ. ತೆರವು ಕಾರ್ಯಾಚರಣೆ ಕುರಿತು ಬಿಬಿಎಂಪಿ ಆಯುಕ್ತರನ್ನು ಭೇಟಿ ಮಾಡುತ್ತೇವೆ," ಎಂದರು.

ಐಒಸಿಯ ಬಂಕ್ ನಡೆಸಲು ನಿಯಮಬಾಹಿರವಾಗಿ ಕ್ಲಬ್‌ನಿಂದ ಲೀಸ್ ಕೊಡಲಾಗಿದೆ. ಲೀಸ್‌ನಿಂದ ಬಂದ ಮೊತ್ತದ ಪೈಕಿ ನಿಗದಿಪಡಿಸಿದ ಹಣವನ್ನು ಸರಕಾರಕ್ಕೆ ಕಟ್ಟಿಲ್ಲ ಎಂಬ ಆರೋಪವೂ ಕ್ಲಬ್ ವಿರುದ್ಧ ಕೇಳಿ ಬಂದಿದೆ.